ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ARCS, DRCS, JRCS ಇರಬಹುದು, ಯಾರೇ ಉನ್ನತ ಅಧಿಕಾರಿ ಇರಬಹುದು, ಕಾನೂನು ಚೌಕಟ್ಟು ಮೀರಿ ವರ್ತನೆ ಮಾಡಿದರೆ ಕಾನೂನು ಚೌಕಟ್ಟಿನಲ್ಲಿ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಆ ಕ್ರಮ ತೆಗೆದುಕೊಳ್ಳತಕ್ಕಂಥ ಜವಾಬ್ದಾರಿ ನಮಗಿದೆ. ಅದನ್ನು ಮಾಡುವಂಥ ಕೆಲಸವನ್ನು ನಾವು ಮಾಡುತ್ತೇವೆ. ಅದನ್ನು ಮಾಡಿದ್ದರೆ, ತನಿಖೆ ಮಾಡತಕ್ಕಂಥ ಕೆಲಸ ಇದೆ. ನನ್ನ ಪ್ರಕಾರ ಯಾವುದೇ ದುರುಪಯೋಗ ಆಗಿಲ್ಲ.

ಉಪಾಧ್ಯಕ್ಷರು : ಶಿವಶಂಕರರೆಡ್ಡಿಯವರೆ, ತಮ್ಮ specific ಆಗಿ ಇದ್ದರೆ ಕೊಡಿ. ಅವರು commit ಮಾಡಿದ್ದಾರೆ. ದಯವಿಟ್ಟು ಕೊಡಿ.

(ಗೊಂದಲ)

(ಈ ಹಂತದಲ್ಲಿ ಡಾ: ಎಂ.ಸಿ. ಸುಧಾಕರ್, ಕೆ.ಪಿ. ಬಚ್ಚೇಗೌಡ, ಎನ್.ಹೆಚ್. ಶಿವಶಂಕರ ರೆಡ್ಡಿಯವರು ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು : ಮಂಜುನಾಥ್‌ರವರೆ, ನಿಮ್ಮ ಪ್ರಶ್ನೆಗೆ ಕಾಲಾವಕಾಶ ಕೇಳಿದ್ದಾರೆ.

ಶ್ರೀ ಹೆಚ್.ಪಿ. ಮಂಜುನಾಥ್ : Further details ಇದ್ದರೆ ಕೇಳುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಮಾಹಿತಿ ತರಿಸಿ ಅವರಿಗೆ ಸರಿಯಾದ ಉತ್ತರ ಕೊಡುತ್ತೇನೆಂದು ಹೇಳಬಯಸುತ್ತೇನೆ.

(ಗೊಂದಲ)

ಉಪಾಧ್ಯಕ್ಷರು : ಮಾಹಿತಿ ತರಿಸಿ ಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ಕೆ. ವೆಂಕಟೇಶ್ : ಇದು ಬಹಳ important question.

ಶ್ರೀ ಹೆಚ್.ಪಿ. ಮಂಜುನಾಥ್ : ಉತ್ತರ ಕೊಟ್ಟಿದ್ದಾರೆ. Further details ತರಿಸಿಕೊಡುತ್ತೇನೆಂದು ಹೇಳಿದ್ದಾರೆ.

ಉಪಾಧ್ಯಕ್ಷರು : ಸಚಿವರೆ, ಸದಸ್ಯರಿಗೆ ಶೀಘ್ರದಲ್ಲೇ ಮಾಹಿತಿ ಕೊಡಿ.

ಶ್ರೀ ಹೆಚ್.ಪಿ. ಮಂಜುನಾಥ್ : ಮುಖ್ಯವಾಗಿ ಈ ಪ್ರಸ್ನೆಯ ಕಳಜಿ ಏನೆಂದರೆ, ...

ಉಪಾಧ್ಯಕ್ಷರು : ನನಗೆ ತಮ್ಮ ಪ್ರಶ್ನೆಯ ಗಂಭೀರತೆ ಗೊತ್ತಿದೆ. ಅವರು ಕಾಲಾವಕಾಶ ಕೇಳಿದ್ದಾರೆ. ಅದಕ್ಕೆ ಉತ್ತರವನ್ನು ಕೊಡಿಸುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಹೆಚ್.ಪಿ. ಮಂಜುನಾಥ್ : ಉತ್ತರ ಬಂದಿದೆ. ಮತ್ತೆ 6 ಕೋಟಿ 43 ಲಕ್ಷ ರೂಪಾಯಿಯ further details ತರಿಸಿ ಕೊಡುತ್ತೇನೆಂದು ಹೇಳಿದ್ದಾರೆ. ಈ ಪ್ರಶ್ನೆಯ ಮುಖ್ಯ ಕಾಳಜಿ ಏನೆಂದರೆ, ಅಲ್ಲಿ ಜ್ಯೇಷ್ಠತೆಯ ಆಧಾರದ ಮೇಲೆ ಏನಾದರೂ ನಡೆದಿದ್ದರೆ, ಈ LOC, bill ಗಳು ಪಾವತಿಯಾಗಿದ್ದರೆ, class-3, class-4 contractors ಇಷ್ಟು ನೋವನ್ನು ಅನುಭವಿಸುತ್ತಿರಲಿಲ್ಲ. ಅದರ ಬಗ್ಗೆ ಕಾಳಜಿ ವಹಿಸಿ. ಈಗಾಗಲೇ ಈ ಪ್ರಶ್ನೆ ಕೇಳಿದ ಮೇಲೆ ಮಾನ್ಯ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿ ಉತ್ತರ ಕೊಟ್ಟಿದ್ದಾರೆ. ಅವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಗ್ರಾಮೀಣ ರಸ್ತೆಗಳ ದುರಸ್ತಿ

125 (1150) ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುದ್ದೇಬಿಹಾಳ ತಾಲ್ಲೂಕಿನಲ್ಲಿರುವ ಗ್ರಾಮೀಣ ರಸ್ತೆಗಳು ತುಂಬಾ ಹದಗೆಟ್ಟಿದ್ದು, ಸಾರ್ವಜನಿಕರು ಓಡಾಡಲು ಸಹ ಯೋಗ್ಯವಿಲ್ಲದಂತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ;

ಇ) ಹಾಗಿಲ್ಲದಿದ್ದಲ್ಲಿ ಕ್ರಮ ಕೈಗೊಳ್ಳುವ ಉದ್ದೇಶ ಸರ್ಕಾರಕ್ಕಿದೆಯೇ?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರು) :

ಅ) ಬಂದಿದೆ.

ಆ) ಪ್ರತಿವರ್ಷ ಗ್ರಾಮೀಣ ರಸ್ತೆಗಳ ನಿರ್ವಹಣೆ / ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮ / ಲೆಕ್ಕಶೀರ್ಷಿಕೆಯಡಿ ಜಿ.ಪಂ.ಗೆ ಅನುದಾನ ಒದಗಿಸಲಾಗುತ್ತಿದೆ.